## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಜಮಖಂಡಿ

ಸಿ ಸಿ ನಂ.**34/2022**

| | |
|---|---|
| 1 ನೇ ಆರೋಪಿಯ ಹೆಸರು | : ಜಾಲಪ್ಪ ಕುಲ್ಲೋಳಿ ಹಾಗೂ ಇತರರು. |
| ತಂದೆಯ ಹೆಸರು | : ಸಂಗಪ್ಪ |
| ವಯಸ್ಸು | : 39 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸಸ್ಥಳ | : ಹುನ್ನೂರು ಗ್ರಾಮ, ತಾಃ ಜಮಖಂಡಿ. |

### ದಂಡ ಪ್ರಕ್ರಿಯಾ ಸಂಹಿತೆ ಕಲಂ.**313** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರ.1) ಈ ಪ್ರಕರಣದಲ್ಲಿ ಸಾಕ್ಷಿದಾರರು ಹೇಳಿರುವುದನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉ: ಕೇಳಿದ್ದೇನೆ.

ಪ್ರ.2) ಪ್ರಾ.ಸಾ.1- ಸುರೇಖಾ ಗಂಡ ಆನಂದ ಕುಲ್ಲೋಳ್ಳಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 27.11.2023 ರಂದು ತನ್ನನ್ನು 8 ನೇ ಆರೋಪಿಯ ಮಗನಾದ ಆನಂದ ತಂದೆ ಮಹಾದೇವ ಕುಲ್ಲೋಳ್ಳಿ ಇವರೊಂದಿಗೆ ಮದುವೆ ಮಾಡಿದ್ದು, ಸ್ವಲ್ಪ ದಿನಗಳವರೆಗೆ ತಾನು ಮತ್ತು ತನ್ನ ಗಂಡನ ಮನೆಯವರು ಚೆನ್ನಾಗಿದ್ದು, ತಾನು 3 ನೇ ಮಗು ಹೆತ್ತ ನಂತರ ಆರೋಪಿತರ ಮನೆಯನ್ನು ಬಿಟ್ಟು, ತಾನು ಮತ್ತು ತನ್ನ ಗಂಡ ಜೊತೆಯಾಗಿ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದೆವು ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.3) ಪ್ರಾ.ಸಾ.1- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ತನ್ನ ಗಂಡ ಗೌಂಡಿ ಕೆಲಸ ಮಾಡುತ್ತಿದ್ದು, ಒಂದು ಬೈಕ್, ಓಮಿನಿ ವಾಹನ ಮತ್ತು ಒಂದು ಮನೆಯನ್ನು ಖರೀದಿಸಿರುತ್ತಾರೆ. ದಿನಾಂಕ 06.05.2021 ರಂದು ತನ್ನ ಗಂಡ ಕರೋನಾ ಕಾಯಿಲೆಯಿಂದ ಮರಣ ಹೊಂದಿದ್ದು, ನಂತರ ತನ್ನ ತಾಯಿ ಉಡುಪಿಯಿಂದ ಬಂದು ತನ್ನ ಜೊತೆಗೆ ಇದ್ದರು. ದಿನಾಂಕ 17.07.2021 ರಂದು ಸಂಜೆ 7.00 ಗಂಟೆಗೆ ತನ್ನ ತಾಯಿಗೆ ಪರಿಚಯವಿರುವ ಉಡುಪಿಯ ಮೆಹಬೂಬಸಾಬ ಇವರು ತಮಗೆ ಮಾತನಾಡಿಸಲು ಬಂದಿದ್ದರು ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.4) ಪ್ರಾ.ಸಾ.1–ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ತಾನು ಮತ್ತು ತನ್ನ ತಾಯಿ ಮೆಹಬೂಬಸಾಬ ಇವರೊಂದಿಗೆ ರಾತ್ರಿ ಸುಮಾರು 8.30 ಗಂಟೆಯವರೆಗೆ ಮಾತನಾಡುತ್ತಾ ಕುಳಿತಿದ್ದು, ನಂತರ ಮೆಹಬೂಬಸಾಬರವರು ಮರಳಿ ಹೋಗುವುದಾಗಿ ಹೇಳಿದಾಗ, ಈಗ ರಾತ್ರಿ ಆಗಿದೆ, ಬೆಳಿಗ್ಗೆ ಹೋಗಿ ಎಂದು ತಾವು ಹೇಳಿದ್ದು, ಅದೇ ಸಮಯಕ್ಕೆ ಆರೋಪಿತರೆಲ್ಲರೂ ತಮ್ಮ ಮನೆಗೆ ಬಂದು ಅಪರಿಚಿತ ವ್ಯಕ್ತಿಯನ್ನು ಮನೆಗೆ ಏಕೆ ಕರೆಸಿರುತ್ತೀರಿ ಎಂದು, ತನಗೆ, ತನ್ನ ತಾಯಿಗೆ ಮತ್ತು ಮೆಹಬೂಬಸಾಬ ಇವರಿಗೆ ಕೈಯಿಂದ ಹೊಡೆದಿದ್ದರಿಂದ, ತನ್ನ ಮತ್ತು ತನ್ನ ತಾಯಿಯ ಕೈಯಲ್ಲಿದ್ದ ಬಳೆಗಳು ಒಡೆದು ಹೋಗಿರುತ್ತವೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.5) ಪ್ರಾ.ಸಾ.1–ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ನಂತರ ಆರೋಪಿತರೆಲ್ಲರೂ ಮೆಹಬೂಬಸಾಬ ಇವರನ್ನು ಎಳೆದುಕೊಂಡು ಹೋಗಿ ಕಂಬಕ್ಕೆ ಕಟ್ಟಿ ಹೊಡೆದು, ತನಗೆ, ತನ್ನ ತಾಯಿಗೆ ಮತ್ತು ಮೆಹಬೂಬಸಾಬ ಇವರಿಗೆ ಕೆಟ್ಟ ಶಬ್ದಗಳಿಂದ ಬೈದಿರುತ್ತಾರೆ. ಆಗ ಮಹಾದೇವ ಕಲ್ಮಠ, ಹೊಳೆಬಸು ಮತ್ತು ಇನ್ನು ಕೆಲವು ವ್ಯಕ್ತಿಗಳು ಬಂದು ಜಗಳ ಬಿಡಿಸಿದ್ದು, ನಂತರ ತಾನು ಮತ್ತು ತನ್ನ ತಾಯಿ ಪೋಲಿಸರ ಮುಂದೆ ದೂರು ನೀಡಿದ್ದು, ತನಗೆ ಹೊಡೆಬಡೆ ಮಾಡಿದ ಆರೋಪಿತರು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.6) ಪ್ರಾ.ಸಾ.2- ಶಕುಂತಲಾ ಗಂಡ ಬಸಪ್ಪ ತೇಲಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ತಾನು ತನ್ನ ಮಗಳಾದ ಚಾಸಾ-1 ರವರನ್ನು 8 ನೇ ಆರೋಪಿಯ ಮಗನಾದ ಆನಂದ ಇವರೊಂದಿಗೆ ಮದುವೆ ಮಾಡಿದ್ದು, ಅವರಿಗೆ ಮೂರು ಜನ ಮಕ್ಕಳು ಜನಿಸಿದ್ದು, ಅವರಿಗೆ 3 ನೇ ಮಗು ಜನಿಸಿದ ನಂತರ ಚಾಸಾ-1 ಮತ್ತು ಆಕೆಯ ಗಂಡ 8 ನೇ ಆರೋಪಿಯ ಮನೆಯನ್ನು ಬಿಟ್ಟು ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದರು. ಚಾಸಾ-1 ರವರ ಗಂಡ ಒಂದು ಬೈಕ್, ಓಮಿನಿ ಗಾಡಿ ಖರೀದಿಸಿದ್ದು, ಅವರು ಗಳಿಸಿದ ಹಣವನ್ನು ಬ್ಯಾಂಕ್‌ನಲ್ಲಿ ಎಫ್.ಡಿ. ಇಟ್ಟಿದ್ದರು ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.7) ಪ್ರಾ.ಸಾ.2- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಸುಮಾರು 5 ವರ್ಷಗಳ ಹಿಂದೆ ಚಾಸಾ-1 ರವರ ಗಂಡ ಕರೋನಾ ಕಾಯಿಲೆಯಿಂದ ಮರಣ ಹೊಂದಿದ್ದು,

ನಂತರ ತಾನು ಚಾಸಾ-1 ರವರ ಮನೆಯಲ್ಲೇ ವಾಸವಿದ್ದೆ. ಸುಮಾರು 4-5 ದಿವಸಗಳ ನಂತರ ತನಗೆ ಪರಿಚಯವಿದ್ದ ಮೆಹಬೂಬಸಾಬ ಇವರು ತನ್ನನ್ನು ಭೇಟಿಯಾಗಲು ಸಂಜೆ 7.00 ಗಂಟೆಗೆ ಬಂದಿದ್ದು, ತಾವೆಲ್ಲರೂ ಮಾತುಕತೆ ಮಾಡುವಷ್ಟರಲ್ಲಿ ರಾತ್ರಿ 10.00 ಗಂಟೆಯಾಯಿತು, ಆಗ ಅವರು ಮರಳಿ ಊರಿಗೆ ಹೋಗುವುದಾಗಿ ಹೇಳಿದಾಗ, ತಾನು ವಾಪಸ್ ಹೋಗಲು ಬಸ್ ಇರುವುದಿಲ್ಲ, ಇಲ್ಲಿಯೇ ಇದ್ದು ಬೆಳಿಗ್ಗೆ ಹೋಗಿ ಎಂದು ಹೇಳಿದೆ. ಅಷ್ಟರಲ್ಲಿ ಆರೋಪಿತರು ತಮ್ಮ ಮನೆಗೆ ಬಂದು, ಗಂಡಸರು ಇಲ್ಲದ ಮನೆಯಲ್ಲಿ ಬೇರೆ ಗಂಡಸನ್ನು ಯಾಕೆ ಕೂರಿಸಿಕೊಂಡಿದ್ದೀರಿ ಎಂದು ಹೇಳಿ, ತಮಗೆ ಹೊಲಸು ಶಬ್ಬಗಳಿಂದ ಬೈದು ಹೊಡೆಬಡೆ ಮಾಡಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.8) ಪ್ರಾ.ಸಾ.2- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- 1 ನೇ ಆರೋಪಿಯು ತನ್ನ ಹಾಗೂ ಚಾಸಾ-1 ರವರ ಮೈಮೇಲಿನ ಸೀರೆಯನ್ನು ಹಿಡಿದು ಎಳೆದಾಡಿ, ತನ್ನ ಕೈಯಲ್ಲಿದ್ದ ಬಳೆಗಳನ್ನು ಒಡೆದಿದ್ದು, ಆರೋಪಿತರು ಮೆಹಬೂಬಸಾಬ ಇವರಿಗೆ ಹೊಡೆಬಡೆ ಮಾಡಿ, ಹೊರಗೆ ಎಳೆದು ತಂದು ಕಂಬಕ್ಕೆ ಕಟ್ಟಿ ಹೊಡೆಬಡೆ ಮಾಡಿ, ತಮಗೆ ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ-5 ಮತ್ತು 6 ರವರು ಬಂದು ಜಗಳ ಬಿಡಿಸಿದ್ದು, ತಾನು ಮತ್ತು ಚಾಸಾ-1 ರವರು ಆರೋಪಿತರ ವಿರುದ್ಧ ದೂರು ನೀಡಿದ್ದು, ನ್ಯಾಯಾಲಯದ ಮುಂದಿರುವ ಆರೋಪಿತರು ತಮಗೆ ಹೊಡೆಬಡೆ ಮಾಡಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.9) ಪ್ರಾ.ಸಾ.6- ಬಾಬುಸಾಬ @ ಮಾಬುಸಾಬ ತಂದೆ ದಾವಲಸಾಬ ಮ್ಯಾಗೇರಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ತನಗೆ ಚಾಸಾ-3 ರವರ ಪರಿಚಯವಿದ್ದು, ಅವರ ಮಗಳಾದ ಚಾಸಾ-1 ರವರ ಗಂಡ ಮರಣ ಹೊಂದಿದ್ದರಿಂದ ತಾನು ಅವರನ್ನು ಮಾತನಾಡಿಸಲು ಜಮಖಂಡಿ ತಾಲೂಕಿನ ಹುನ್ನೂರು ಗ್ರಾಮಕ್ಕೆ ದಿನಾಂಕ 17.07.2021 ರಂದು ಸಂಜೆ 7.30 ಗಂಟೆಗೆ ಬಂದಿದ್ದು, ತಾನು ಚಾಸಾ-1 ಮತ್ತು 3 ರವರನ್ನು ಮಾತನಾಡಿಸಿ ಹೊರಡಲು ಸಿದ್ಧನಾದಾಗ ಚಾಸಾ-3 ರವರು ಈಗ ರಾತ್ರಿ 8.00 ಗಂಟೆಯಾಗಿದೆ, ಬಸ್‌ಗಳು ಸಿಗುವುದಿಲ್ಲ, ರಾತ್ರಿ ಇಲ್ಲೇ ಉಳಿದು ಬೆಳಿಗ್ಗೆ ಹೋಗುವಂತೆ ಹೇಳಿದ್ದರಿಂದ ತಾನು ಅವರ ಮನೆಯಲ್ಲಿ ಉಳಿದುಕೊಂಡಿರುತ್ತೇನೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.10) ಪ್ರಾ.ಸಾ.6- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಅದೇ ದಿನ

ರಾತ್ರಿ 10.00 ರಿಂದ 10.30 ಗಂಟೆ ಮಧ್ಯದಲ್ಲಿ ಆರೋಪಿತರೆಲ್ಲರೂ ಚಾಸಾ-1 ಮತ್ತು 3 ರವರ ಮನೆಯ ಒಳಗೆ ಬಂದು ತನ್ನನ್ನು ಹೊರಗೆ ಎಳೆದು ತಂದಿದ್ದು, ಆರೋಪಿತರ ಪೈಕಿ 3-4 ಜನರು ಚಾಸಾ-1 ರವರಿಗೆ "ಗಂಡ ಸತ್ತ ನಂತರ ನೀನು ಯಾರನ್ನೋ ಮನೆಯಲ್ಲಿ ತಂದು ಕೂಡಿಸಿಕೊಂಡಿದ್ದೀರಾ" ಎಂದು ಹೇಳಿ ಕೈಯಿಂದ ಹೊಡೆಬಡೆ ಮಾಡಿದ್ದು, ನಂತರ ತನ್ನನ್ನು ಆರೋಪಿತರು ಲೈಟಿನ ಕಂಬಕ್ಕೆ ಕಟ್ಟಿ ಹಾಕಿ, ಒದ್ದು, ಕಿವಿಗೆ ಹೊಡೆದಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.11) ಪ್ರಾ.ಸಾ.6- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಆರೋಪಿತರು ತನ್ನ ಜೀವ ತೆಗೆಯಲು ಹೊಡೆದಿದ್ದು, ತನ್ನನ್ನು ಹೊಡೆಯುವುದನ್ನು ಓಣಿಯಲ್ಲಿನ ಜನರು ನೋಡಿದ್ದರೂ ಸಹಿತ ಯಾರೂ ಬಿಡಿಸಲು ಬಂದಿರುವುದಿಲ್ಲ. ನಂತರ ಓಣಿಯ ಜನರು ತನ್ನನ್ನು ಆರೋಪಿತರಿಂದ ಬಿಡಿಸಿದ್ದು, ತಾನು, ಚಾಸಾ-1 ಮತ್ತು 3 ರವರು ಕಂಪ್ಲೇಂಟ್ ಕೊಡಲು ಪೋಲಿಸ್ ಠಾಣೆಗೆ ಹೋದಾಗ, ಚಾಸಾ-1 ರವರು ಕಂಪ್ಲೇಂಟ್ ಕೊಟ್ಟಿರುತ್ತಾರೆ. ಪೋಲಿಸರು ತನ್ನನ್ನು ಬೆಳಿಗ್ಗೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದ್ದು, ತಾನು ಒಂದು ದಿನ ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಪಡೆದಿದ್ದು, ಎಂ.ಓ-2 ಹಗ್ಗದಿಂದ ತನ್ನನ್ನು ಆರೋಪಿತರು ಕಟ್ಟಿ ಹಾಕಿದ್ದು, ತಾನು ಪೋಲಿಸರ ಮುಂದೆ ಘಟನೆಯ ಬಗ್ಗೆ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.12) ಪ್ರಾ.ಸಾ.7- ಡಾ॥ ವ್ಹಿ.ಸಿ. ಮುದಿಗೌಡರ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಜಮಖಂಡಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 18.07.2021 ರಂದು ಬೆಳಿಗ್ಗೆ 7.30 ಗಂಟೆಗೆ ಪೋಲಿಸರು ಸುರೇಖಾ, ಶಕುಂತಲಾ ತೇಲಿ ಮತ್ತು ಬಾಬುಸಾಬ ಮ್ಯಾಗೇರಿ ಇವರನ್ನು ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದು, ಸುರೇಖಾ ಇವರ ಎಡಮುಂಗೈ ಮತ್ತು ಬಲಮುಂಗೈನ ಹಿಂಭಾಗದಲ್ಲಿ ಮತ್ತು ಮುಂಭಾಗದಲ್ಲಿ ತೆರಚಿದ ಗಾಯಗಳಾಗಿದ್ದವು. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಗಟ್ಟಿಯಾದ ಮತ್ತು ಮೊಂಡಾದ ವಸ್ತುವಿನಿಂದ ಹೊಡೆದರೆ ಸದರಿ ಗಾಯಗಳು ಆಗಬಹುದಾಗಿದ್ದು, ಯಾವುದೇ ವ್ಯಕ್ತಿ ಕೈಯಲ್ಲಿ ಗಾಜಿನ ಬಳೆ ಧರಿಸುವಾಗ ಅವುಗಳು ಅನಿರೀಕ್ಷಿತವಾಗಿ ಒಡೆದು ಹೋದರೆ ಸದರಿ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.13) ಪ್ರಾ.ಸಾ.7- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಶಕುಂತಲಾ ಇವರ ಬಲಮುಂಗೈಗೆ ತೆರಚಿದ ಗಾಯಗಳಾಗಿದ್ದು, ಅವರು ಬಲಭುಜದಲ್ಲಿ ನೋವು ಇದೆ ಎಂದು ತಿಳಿಸಿದ್ದರು. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಗಟ್ಟಿಯಾದ ಮತ್ತು ಮೊಂಡಾದ ವಸ್ತುವಿನಿಂದ ಹೊಡೆದರೆ ಸದರಿ ಗಾಯಗಳು ಆಗಬಹುದಾಗಿದ್ದು, ಯಾವುದೇ ವ್ಯಕ್ತಿ ಕೈಯಲ್ಲಿ ಗಾಜಿನ ಬಳೆ ಧರಿಸುವಾಗ ಅವುಗಳು ಅನಿರೀಕ್ಷಿತವಾಗಿ ಒಡೆದು ಹೋದರೆ ಸದರಿ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.14) ಪ್ರಾ.ಸಾ.7- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಬಾಬುಸಾಬ ಇವರ ಮೂಗಿಗೆ ಊತ ಉಂಟಾಗಿದ್ದು, ಅವರು ಸಂಪೂರ್ಣ ಮೈಕೈ ನೋವು ಆಗಿದೆ ಎಂದು ಹೇಳಿದ್ದರು. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಗಟ್ಟಿಯಾದ ಮತ್ತು ಮೊಂಡಾದ ವಸ್ತುವಿನಿಂದ ಹೊಡೆದರೆ ಸದರಿ ಗಾಯಗಳು ಆಗಬಹುದಾಗಿದ್ದು, ಒಬ್ಬ ವ್ಯಕ್ತಿ ತನ್ನ ಕೈಯನ್ನು ಮುಷ್ಠಿ ಮಾಡಿ ಮತ್ತೊಬ್ಬ ವ್ಯಕ್ತಿಯ ಮೂಗಿಗೆ ಹೊಡೆದರೆ ಮೇಲೆ ಹೇಳಿದ ಗಾಯ ಆಗಬಹುದು. ತಾನು ಈ ಕುರಿತು ಗಾಯದ ಪ್ರಮಾಣ ಪತ್ರಗಳನ್ನು ನೀಡಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.15) ಪ್ರಾ.ಸಾ.8- ಬಿ. ಎಸ್. ಬಿರಾದಾರ, ಎಎಸ್ಐ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 18.07.2021 ರಂದು ತಾನು ತಮ್ಮ ಠಾಣೆಯ ಕ್ಯಾಮರಾದಿಂದ ಚಾಸಾ-1, 3 ಮತ್ತು 4 ರವರು ಅನುಭವಿಸಿದ ಗಾಯಗಳ ಫೋಟೋಗಳನ್ನು ತೆಗೆದಿದ್ದು, ಅದೇ ದಿನ ಸಂಜೆ 5.00 ರಿಂದ 6.00 ಗಂಟೆ ಮಧ್ಯದಲ್ಲಿ ಘಟನಾ ಸ್ಥಳದ ಫೋಟೋಗಳನ್ನು ತೆಗೆದು, ಎಲ್ಲಾ ಫೋಟೋಗಳನ್ನು ಪ್ರಿಂಟ್ ತೆಗೆದು ಸರ್ಟಿಫಿಕೇಟನೊಂದಿಗೆ ಚಾಸಾ-11 ರವರಿಗೆ ನೀಡಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.16) ಪ್ರಾ.ಸಾ.10- ಸುಭಾಸಚಂದ್ರ ತಂದೆ ಗುರುಲಿಂಗಪ್ಪ ಕೋಟ್ಯಾಳ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 18.07.2021 ರಂದು ಚಾಸಾ-1 ರವರು ಸಲ್ಲಿಸಿದ ದಸ್ತೂರ್ ಲಿಖಿತ ದೂರಿನ ಆಧಾರದ ಮೇಲೆ ತಾನು ಅಪರಾಧ ಸಂಖ್ಯೆ:85/2021 ಎಂದು ಪ್ರಕರಣ ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ಸಿಪಿಸಿ 616 ರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಇಮೇಲ್ ಮೂಲಕ ಮೇಲಾಧಿಕಾರಿಗಳಿಗೆ

ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.17) ಪ್ರಾ.ಸಾ.10- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದೆರೆ- ಅದೇ ದಿನ 16.45 ರಿಂದ 17.45 ಗಂಟೆಯವರೆಗೆ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚರಾದ ಚಾಸಾ-2 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಸ್ಥಳದಲ್ಲಿ ಗಾಜಿನ ಬಳೆ ಚೂರುಗಳನ್ನು ಮತ್ತು ಒಂದು ನೂಲಿನ ಹಗ್ಗವನ್ನು ಜಪ್ತಿಪಡಿಸಿಕೊಂಡು, ಫೋಟೋಗಳನ್ನು ತೆಗೆಸಿದ್ದು, ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ಜಪ್ತಿಪಡಿಸಿದ ಸ್ವತ್ತುಗಳ ಕುರಿತು ಪಿ.ಎಫ್ ಸಲ್ಲಿಸಿದ್ದು, ಚಾಸಾ-1 ರವರ ಪುರವಣಿ ಹೇಳಿಕೆ ಮತ್ತು ಚಾಸಾ-3 ರಿಂದ 8 ರವರ ಹೇಳಿಕೆಗಳನ್ನು ಪಡೆದಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.18) ಪ್ರಾ.ಸಾ.10- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದೆರೆ- ದಿನಾಂಕ 18.07.2021 ರಂದು ಚಾಸಾ-10 ರವರಿಂದ ತನಿಖಾ ಪ್ರಕ್ರಿಯೆಯ ಫೋಟೋಗಳನ್ನು ತೆಗೆದಿರುವ ಬಗ್ಗೆ ಹೇಳಿಕೆ ಮತ್ತು ಪ್ರಮಾಣ ಪತ್ರ ಪಡೆದಿದ್ದು, ದಿನಾಂಕ 19.07.2021 ರಂದು ಆರೋಪಿತರಿಗೆ ನೋಟೀಸ್ ನೀಡಿ ಪೋಲಿಸ್ ಠಾಣೆಗೆ ಕರೆಸಿ ವಿಚಾರಿಸಿ, ದಸ್ತಗಿರಿ ನಿಯಮಾವಳಿಗಳನ್ನು ಪಾಲಿಸಿ ಮುಚ್ಚಳಿಕೆ ಬರೆಸಿಕೊಂಡು ಅವರನ್ನು ಬಿಡುಗಡೆ ಮಾಡಿರುತ್ತೇನೆ. ದಿನಾಂಕ 31.07.2021 ರಂದು ಚಾಸಾ-1 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳನ್ನು ವೈದ್ಯರಿಂದ ಪಡೆದಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.19) ಪ್ರಾ.ಸಾ.10- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದೆರೆ- ದಿನಾಂಕ 16.08.2021 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಇಬಿ ಜಮಖಂಡಿ ಇವರಿಂದ ವಿದ್ಯುಚ್ಛಕ್ತಿ ಸರಬರಾಜು ಇದ್ದ ಬಗ್ಗೆ ಹೇಳಿಕೆ ಪಡೆದಿದ್ದು, ದಿನಾಂಕ 19.08.2021 ರಂದು ಪಿ.ಡಿ.ಓ ಗ್ರಾಮ ಪಂಚಾಯತ್, ಹುನ್ನೂರು ಇವರಿಂದ ಚಾಸಾ-1 ರವರ ಮನೆಯ ದಾಖಲೆಯನ್ನು ಪಡೆದಿದ್ದು, ದಿನಾಂಕ 11.09.2021 ರಂದು ಚಾಸಾ-3 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.20) ಪ್ರಾ.ಸಾ.10- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದೆರೆ- ದಿನಾಂಕ

23.10.2021 ರಂದು ಚಾಸಾ-1 ಮತ್ತು 3 ರವರನ್ನು ಮಾನ್ಯ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ಮಾನ್ಯ ನ್ಯಾಯಾಧೀಶರು ದಂಡ ಪ್ರಕ್ರಿಯಾ ಸಂಹಿತೆ ಕಲಂ.164 ರ ಅಡಿಯಲ್ಲಿ ದಾಖಲಿಸಿಕೊಂಡ ಹೇಳಿಕೆಗಳನ್ನು ಪಡೆದಿದ್ದು, ದಿನಾಂಕ 28.11.2021 ರಂದು ತನಿಖೆ ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ: ಸುಳ್ಳು

ಪ್ರ.21) ಈ ಪ್ರಕರಣದ ಕುರಿತು ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ?

ಉಃ ಇಲ್ಲ.

ಪ್ರ.22) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆಯನ್ನು ಮಾಡಿಸುವಿರಾ?

ಉಃ ಇಲ್ಲ.

(ಆರೋಪಿಯ ಹೇಳಿಕೆಯನ್ನು ನನ್ನ ಸ್ವ-ಹಸ್ತಾಕ್ಷರದಿಂದ ತೆರೆದ ನ್ಯಾಯಾಲಯದಲ್ಲಿ ಪಡೆದಿರುತ್ತೇನೆ)

RAJASHEKHAR Digitally signed by RAJASHEKHAR Date: 2026.03.06 18:01:46 +0530

ಸ್ಥಳಃ ಜಮಖಂಡಿ
ದಿನಾಂಕಃ 06.03.2026.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಜಮಖಂಡಿ.